# ನಿನ್ನ ದಿವ್ಯ ಮೂರುತಿಯ ಕಣ್ಣದಣಿಯಲು

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao
3. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
4. **Note:** Lyrics mentioned without highlights are as per Ref. 1. The wordings in Ref. 2 are almost similar to Ref. 1 except few variations which are not considered here. The lyrics in Ref. 3 are slightly different and are given separately in yellow highlights.
5. **Note:** Singer has followed lyrics as in Ref.1.

ರಾಗ: ಮೋಹನ ತಾಳ: ಖಂಡ ಛಾಪು

ನಿನ್ನ ದಿವ್ಯ ಮೂರುತಿಯ ಕಣ್ಣು ದಣಿಯ ನೋಡಿ
ಧನ್ಯನಾದೆನೋ ಧರೆಯೊಳು || ಪ ||

ಇನ್ನು ಈ ಭವ ಭಯಕೆ ಅಂಜಲೇತಕೋ
ಚೆನ್ನ ಸಿರಿ ವೆಂಕಟೇಶ ಶ್ರೀಶ || ಅಪ ||

ಏಸು ಜನ್ಮದ ಪುಣ್ಯ ಬಂದೊದಗಿತೋ ಶ್ರೀ ಸ್ವಾಮಿ ಪುಷ್ಕರಣಿ ಯೋಳ್
ಸ್ನಾನ ಜಪ ತಪವ ಮಾಡಿ ವರಹ ದೇವರ ನೋಡಿ ಶ್ರೀ ಸ್ವಾಮಿ ಮಹಾ-ದ್ವಾರಕೆ
ಈ ಶರೀರವನು ಈಡ್ಯಾಡಿ ಪ್ರದಕ್ಷಿಣೆ ಮಾಡಿ ಲೇಶದಿಂ ಪೊಗಳುತಲಿ
ಆ ಸುವರ್ಣದ ಗರುಡ ಕಂಭವನೆ ನೋಡಿ ಸಂತೋಷದಿಂ ಕೊಂಡಾಡಿದೆ ಬಿಡದೆ || 1 ||

ನೆಟ್ಟನೆರಡನೇ ದ್ವಾರವನೆ ದಾಂಟಿ ಪೋಗುತಲಿ ದಟ್ಟಣಿಯು ಬಹು ಜನದಲಿ
ಘಟ್ಟಿ ಮನದಲಿ ತಲೆ ಚಿಟ್ಟಿಡುತ ನೆಟ್ಟನೆ ಕಟ್ಟಾಂಜನಕೆ ತಾ ಬರುತಲಿ
ಕೃಷ್ಣಾಜಿನದವರ ಪೆಟ್ಟುಗಳ ಕಾಣುತಲಿ ಕಂಗೆಟ್ಟು ಹರಿಯೆನುತಲಿ
ಬೆಟ್ಟದಧಿಪತಿ ನಿನ್ನ ದೃಷ್ಟಿಂದ ಕಾಣುತಲಿ ಸುಟ್ಟಿತೆನ್ನಯ ದುರಿತವು ಸರ್ವವೂ || 2 ||

ಶಿರದಲ್ಲಿ ರವಿಕೋಟಿ ತೇಜದಿಂದೆಸೆವಂಥ ವರ ಕಿರೀಟವು ಕುಂಡಲ
ಕೊರಳೊಳಿಹ ಸರಿಗೆ ವೈಜಯಂತಿಯ ಮಾಲೆ ಪರಿ ಪರಿಯ ಹಾರಗಳನು
ಉರದಿ ಶ್ರೀವತ್ಸವನು ಕರದಿ ಶಂಖ ಚಕ್ರಗಳು ವರನಾಭಿ ಮಾಣಿಕವನು
ನಿರುಪಮ ಮಣಿ ಖಚಿತ ಕಟಿಸೂತ್ರ ಪೀತಾಂಬ್ರ ಚರಣದ್ವಯದಂದಿಗೆಯನು ಇನ್ನು || 3 ||

ಇಕ್ಷುಚಾಪನ ಪಿತನೆ ಪಕ್ಷೀಂದ್ರ ವಾಹನನೆ ಲಕ್ಷ್ಮೀಪತಿ ಕಮಲಾಕ್ಷನೆ
ಅಕ್ಷಯ ಅಜ ಸುರೇಂದ್ರಾದಿ ವಂದಿತನೆ ಸಾಕ್ಷಾಜ್ಜಗನ್ನಾಥನೇ
ರಾಕ್ಷಸಾಂತಕನೆ ನಿರಪೇಕ್ಷ ನಿತ್ಯತೃಪ್ತನೇ ನಿರುಪಮ ನಿಸ್ಸೀಮನೆ
ಕುಕ್ಷಿಯೊಳಗಿರೇಳು ಲೋಕವನು ತಾಳ್ದವನೇ ರಕ್ಷಿಸುವುದೆಂದು ದಯದಿ ಮುದದಿ || 4 ||

ಉರಗ-ಗಿರ ಅರಸು ನಿಮ್ಮ ಚರಣಗಳ ಕಂಡ ಮೇಲೆ ಉರಗ ಕರಿ ವ್ಯಾಘ್ರ ಸಿಂಹ
ಅರಸು ಚೋರಾಗ್ನಿ ವೃಶ್ಚಿಕ ಮೊದಲಾದ ಪರಿ ಪರಿಯ ಬಹಳ ಭಯವು
ಪರಮ ವಿಷ-ಲಂಪಟದೊಳಗೆ ನಾ ಸಿಗದಂತೆ ಕರುಣಿಸುವುದೊಲಿದು ದಯದಿ
ಸ್ಮರಗಧಿಕ ಲಾವಣ್ಯ ತಂದೆ ಪುರಂದರ ವಿಠಲ ಶರಣ ಜನ ಕರುಣಾರ್ಣವ ದೇವಾ || 5 ||

**Note:** The lyrics given below are as per Ref. 3 above.

ರಾಗ: ರೇಗುಪ್ತಿ ತಾಳ: ಝಂಪೆ

ನಿನ್ನ ದಿವ್ಯ ಮೂರುತಿಯ ಕಣ್ಣು ದಣಿಯಲು ನೋಡಿ
ಧನ್ಯನಾದೆನು ಧರೆಯೊಳು
ಇನ್ನು ಈ ಭವ ಭಯಕೆ ಅಂಜಲೇತಕೆ ದೇವ
ಚೆನ್ನ ಶ್ರೀ ವೆಂಕಟೇಶಾ ಈಶ || ಪ ||

ಏಸು ಜನ್ಮದ ಸುಕೃತ ಫಲವು ಬಂದೊದಗಿತೋ ಈ ಸ್ವಾಮಿ-ಪುಷ್ಕರಣಿಯೋಳ್
ನಾ ಸ್ನಾನವನು ಮಾಡಿ ವರಹ ದೇವರ ನೋಡಿ ಶ್ರೀ ಸ್ವಾಮಿ ಮಹಾ-ದ್ವಾರಕೆ
ಈ ಶರೀರವನು ಈಡಾಡಿ ಪ್ರದಕ್ಷಿಣೆ ಮಾಡಿ ಲೇಸಿನಿಂದಲಿ ಪೊಗಳುತ
ಆ ಸುವರ್ಣದ ಗರುಡಗಂಬವನು ಸುತ್ತಿ ಸಂತೋಷದಿಂ ಕೊಂಡಾಡಿದೆ ಬಿಡದೆ || ೧ ||

ನೆಟ್ಟನೆಯ ದ್ವಾರವ ದಾಟಿ ಪೋಗುತಲಿರಲು ದಟ್ಟಣೆಯ ಮಹಾಜನದೊಳು

ಕೃಷ್ಣಾಜಿನದವರ ಕೈ ಪೆಟ್ಟು ಕಾಣುತ್ತ ಕಂಗೆಟ್ಟು ಹರಿ ಹರಿಯೆನುತಲಿ
ಗಟ್ಟಿ ಮನಸಿನಲಿ ತಲೆ ಚಿಟ್ಟಿಟ್ಟು ಶೀಘ್ರದಲಿ ಕಟ್ಟಾಂಜನಕೆ ಪೋಗುತ
ಬೆಟ್ಟದಧಿಪತಿ ನಿನ್ನ ದೃಷ್ಟಿಯಿಂದಲಿ ನೋಡೆ ಸುಟ್ಟೆ ಎನ್ನಯ ದುರಿತವಾ ದೇವಾ || ೨ ||

ಶಿರದಲ್ಲಿ ರವಿಕೋಟಿ ತೇಜದಿಂದೆಸೆಯುವ ಕಿರೀಟ ವರ ಕುಂಡಲಗಳ
ಕೊರಳಲ್ಲಿ ಸರ ವೈಜಯಂತಿ ವನಮಾಲೆಯನು ಪರಿ ಪರಿಯ ಹಾರಗಳನು
ಉರದಿ ಶ್ರೀವತ್ಸವನು ಕರದಿ ಶಂಖ ಚಕ್ರಗಳ ವರನಾಭಿ ಮಾಣಿಕವನು
ನಿರುಪ ಮಣಿ ಖಚಿತ ಕಟಿಸೂತ್ರ ಪೀತಾಂಬರವ ಚರಣಯುಗ ದಂದುಗೆಯನು ಇನ್ನು || ೩ ||

ಇಕ್ಷುಚಾಪನ ಪಿತನೆ ಪಕ್ಷೀಂದ್ರ ವಾಹನನೆ ಲಕ್ಷ್ಮೀಪತಿ ಕಮಲಾಕ್ಷನೆ
ಅಕ್ಷತ್ರಯ ಅಜ ಸುರೇಂದ್ರಾದಿ ವಂದಿತನೆ ಸಾಕ್ಷಾಜ್ಜಗನ್ನಾಥನೇ
ರಾಕ್ಷಸಾಂತಕ ಭಕ್ತವತ್ಸಲ ಕೃಪಾಳು ನಿರಪೇಕ್ಷ ನಿತ್ಯತೃಪ್ತನೇ
ಕುಕ್ಷಿಯೊಳಗಿರೇಳು ಭುವನವನು ಪಾಲಿಪನೆ ರಕ್ಷಿಸುವುದೊಳಿತು ದಯದಿ ಮುದದಿ || ೪ ||

ಉರಗ-ಗಿರಯರಸ ನಿನ್ನ ಚರಣ ನೋಡಿದ ಮೇಲೆ ಉರಗ ಕರಿ ವ್ಯಾಘ್ರ ಸಿಂಹ
ಅರಸು ಚೋರಾಗ್ನಿ ವೃಶ್ಚಿಕ ಕರಡಿ ಮೊದಲಾದ ಪರಿ ಪರಿಯ ಭಯಗಳುಂಟೇ
ಪರಮ ವಿಷಯಗಳ ಲಂಪಟದೊಳಗೆ ಸಿಲುಕಿದೆ ಕರುಣಿಸುವುದೊಳಿತು ದಯವಾ
ಸ್ಮರಗಧಿಕ ಲಾವಣ್ಯ ಪುರಂದರ ವಿಠಲನೇ ಶರಣಜನ ಕರುಣಾರ್ಣವಾ ದೇವಾ || ೫ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಏಸು** – ಎಷ್ಟು.

**ಸ್ವಾಮಿಪುಷ್ಕರಿಣಿ** – ಬೆಟ್ಟದ ಮೇಲೆ ಗುಡಿಯ ನೆರೆಯಲ್ಲೇ ಇರುವ ಕೊಳ.

**ಶರೀರವನ್ನು ಈಡಾಡಿ** = ದಂಡ ಪ್ರಣಾಮ ಮಾಡಿ

**ವರಹ ದೇವರ** – ಕೊಳದ ದಂಡೆಯ ಮೇಲಿರುವ ವರಾಹ ಸ್ವಾಮಿ ಸನ್ನಿಧಿ; ಈ ಕ್ಷೇತ್ರದಲ್ಲಿ ಇದೇ ಪ್ರಾಚೀನದೈವವೆಂದೂ, ವೆಂಕಟೇಶ್ವರನಿಗೆ ಇಲ್ಲಿ ಎಡೆಯನ್ನಿತ್ತುದೇ ಈ ದೈವವೆಂದೂ, ಆದ್ದರಿಂದ ವೆಂಕಟೇಶ್ವರನ ದರ್ಶನಕ್ಕೆ ಮೊದಲು ವರಾಹ ಸ್ವಾಮಿಯ ದರ್ಶನವಾಗಬೇಕೆಂದೂ ಕ್ಷೇತ್ರವಿಧಿಯ ವಿವರಗಳು.

**ಶ್ರೀವತ್ಸ** = ವಿಷ್ಣುವಿನ ಬಲಗಡೆಯ ಎದೆಯ ಮೇಲಿನ ಲಕ್ಷ್ಮೀ ದೇವಿಯ ಗುರುತು

**ಕಟ್ಟಾಂಜನ** – ಕ್ಯಡೆಯ ಅಂಗಳ; ಈಗ ತಿರುಮಾಮಣಿ ಮಂಟಪವೆನ್ನುವ ಆವರಣ.

**ಕೃಷ್ಣಾಜಿನದವರ ಪೆಟ್ಟುಗಳ** – ಮೊದಲಿಗೆ ಬೆಟ್ಟದ ಗುಡಿಯಲ್ಲಿ ದಟ್ಟವಾದ ಜನ ಸಂದಣಿಯಿರುವಾಗ ದೇವರ ದರ್ಶನವಾದ ಒಡನೆ ಭಕ್ತರು ಅಲ್ಲೇ ನಿಲ್ಲದೆ ಮುಂದೆ ಸಾಗಿ ಉಳಿದವರಿಗೆ ದರ್ಶನದ ಅವಕಾಶ ಮಾಡಿಕೊಡಲೆಂದು, ಗರ್ಭಗುಡಿಯ ಹೊರಗೆ ಕೆಲವರು ಅಧಿಕಾರಿಗಳು ನಿಂತು ಕೃಷ್ಣಾಜಿನ ಸುತ್ತಿದ ಬೆತ್ತದಿಂದ ಅಲ್ಲೇ ನಿಲ್ಲುವ ಭಕ್ತರ ಬೆನ್ನಿಗೆ ಹೊಡೆಯುವ ವಾಡಿಕೆಯಿದ್ದಿತು. ಈ ಊಳಿಗದವರನ್ನು ಕೃಷ್ಣಾಜಿನದವರೆಂದು ಕರೆಯುತ್ತಿದ್ದರು. ಈಗಿನಂತೆ ಕ್ಯೂ ಇರದಿದ್ದ ಕಾಲ ಅದು.

**ಉರದಿ** – ಎದೆಯ ಮೇಲೆ.

**ಕಟಿಸೂತ್ರ** – ಉಡಿದಾರ.

**ಇಕ್ಷುಚಾಪನ ಪಿತನೆ** – ಕಬ್ಬನ್ನೇ ಬಿಲ್ಲಾಗಿ ಹೊಂದಿರುವ ಮನ್ಮಥನ ತಂದೆಯಾದ ವಿಷ್ಣುವೆ.

**ಪಕ್ಷೀಂದ್ರ** – ಪಕ್ಷಿಗಳಿಗೆ ಒಡೆಯ ಗರುಡ.

**ಅಕ್ಷಯ ಅಜ...** – ನಾಶವಿಲ್ಲದ ಬ್ರಹ್ಮ ಮೊದಲಾದ ದೇವತೆಗಳಿಂದ ವಂದಿತನಾದವನೆ.

**ಅಕ್ಷತ್ರಯ** = ಶಿವ

**ನಿರಪೇಕ್ಷ** – ಯಾವ ಕಾಮನೆಯೂ ಇಲ್ಲದ; ಜಗತ್ತಿನ ಸೃಷ್ಟಿ, ಸ್ಥಿತಿ ಮೊದಲಾದ ತನ್ನ ಕೆಲಸಕ್ಕೆ ಯಾರ ನೆರವನ್ನೂ ಬಯಸದ.

**ನಿರುಪಮ ನಿಸ್ಸೀಮ** – ಎಣೆಯಿಲ್ಲದ, ಕೊನೆಯಿಲ್ಲದ (ಸೀಮೆಯೆಂದರೆ ಗಡಿ).

**ಕುಕ್ಷಿಯೊಳಗೀರೇಳು ಲೋಕವನು...** – ತನ್ನ ಹೊಟ್ಟೆಯಲ್ಲೇ ಹದಿನಾಲ್ಕು ಲೋಕಗಳನ್ನು ಅಡಗಿಸಿಕೊಂಡಿರುವ.

**ಉರಗಗಿರಿ ಅರಸು** – ಶೇಷಾಚಲಪತಿ.

**ಉರಗ ಕರಿ ವ್ಯಾಘ್ರ** – ಹಾವು, ಆನೆ, ಹುಲಿ.

**ವೃಶ್ಚಿಕ** = ಚೇಳು

**ಅರಸು ಚೋರಾಗ್ನಿ ವೃಶ್ಚಿಕ** – ರಾಜರು, ಕಳ್ಳರು, ಬೆಂಕಿ, ಚೇಳು, ದಾಸರು ದುಷ್ಟ ಪ್ರಾಣಿಗಳ ಸಾಲಿನಲ್ಲಿ ರಾಜರನ್ನೂ ಸೇರಿಸಿರುವುದನ್ನು ಗಮನಿಸಬೇಕು!

**ಸ್ಮರ** = ಕಾಮ

**ಸ್ಮರಗಧಿಕ ಲಾವಣ್ಯ** – ಮನ್ಮಥನ ಚೆಲುವನ್ನೂ ಮೀರಿದ ಚೆಲುವ.

**ಶರಣಜನ ಕರುಣಾರ್ಣವ** – ಮೊರೆ ಹೊಕ್ಕವರಿಗೆ ದಯೆಯ ಸಮುದ್ರವೇ ಆಗಿರುವ.

**Classification:** Keerthane
**Ankita:** tande purandara vittala
**Location:** Tirupati
**Category:** Srinivasa Stuti,
**Sub-Category:** Vishnu, srinivasa, Tirupati, divya, bhumi, bhava, punya, snana, japa, deha, bangara, garuda, jana, mana, Krishna, surya, kolalu, shankha, chakra, pakshi, Lakshmi, Akshaya, asura, loka, uraga, arasa, kalla, karuna, sharana, shiva
**Pravachana:** NA
**Explanation:** NA